| ವರ್ಷ | ಮೊತ್ತ (ರೂ.ಕೋಟಿಗಳಲ್ಲಿ) |
|---|---|
| 2010–11 | 200.59 |
| 2011–12 | 206.60 |
| 2012 ಜನವರಿ 13ರ ಅಂತ್ಯದ ವರೆಗೆ | 190.00 |
| **ಒಟ್ಟು** | **597.19** |

ಉ) ಪಾಲಿಕೆಗೆ ತ್ಯಾಜ್ಯ ಸೆಸ್ ಮೂಲಕ ಬರುತ್ತಿರುವ ಆದಾಯವು ಈ ಕೆಳಕಂಡಂತೆ ಇರುತ್ತದೆ.

| ವರ್ಷ | ಮೊತ್ತ (ರೂ.ಕೋಟಿಗಳಲ್ಲಿ) |
|---|---|
| 2010–11 | -- |
| 2011–12 | 27098 |
| 2012 ಜನವರಿ 13ರ ಅಂತ್ಯದ ವರೆಗೆ | 39.00 |
| **ಒಟ್ಟು** | **66.98** |

**ವಿಶೇಷ ಅನುದಾನ**

**(200) 129**

**ಶ್ರೀ ಡಾ॥ ಮಾಲಕರೆಡ್ಡಿ ಎ.ಬಿ (ಯಾದಗಿರಿ)**

ಅ) ಯಾದಗಿರಿ ಜಿಲ್ಲೆಯ ಉದ್ಘಾಟನಾ ಸಂದರ್ಭದಲ್ಲಿ ಜಿಲ್ಲೆಗೆ ಸರ್ಕಾರ ರೂ.300 ಕೋಟಿ ವಿಶೇಷ ಅನುದಾನ ಘೋಷಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಇದುವರೆವಿಗೂ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? ಈ ಹಣದಲ್ಲಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳು ಯಾವುವು? ಇಲಾಖಾವಾರು ವಿವರ ಒದಗಿಸುವುದು?

ಇ) ವಿಶೇಷ ಅನುದಾನ ಪೂರ್ಣ ಬಿಡುಗಡೆಯಾಗದೆ ಅನುದಾನದ ನಿರೀಕ್ಷೆಯಲ್ಲಿ ಪಟ್ಟಿಮಾಡಲಾದ ಯೋಜನೆಗಳಾವುವು?

ಈ) ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಜಿಲ್ಲೆಯಲ್ಲಿ ನಾಲ್ಕು ವರ್ಷಗಳಾದರೂ ಪೂರ್ಣ ಅನುದಾನ ಬಿಡುಗಡೆ ಮಾಡಲು ಸರ್ಕಾರ ವಿಳಂಬ ಧೋರಣೆ ಅನುಸರಿಸುತ್ತಿರುವುದಕ್ಕೆ ಕಾರಣವೇನು?

**ಶ್ರೀ ಕೆ.ಎಸ್. ಈಶ್ವರಪ್ಪ ಉಪ ಮುಖ್ಯಮಂತ್ರಿ**

ಅ) ಬಂದಿದೆ.

ಆ) ಒಟ್ಟು ರೂ.43.36 ಕೋಟಿ ಅನುದಾನ ಬಿಡುಗಡೆಯಾಗಿದೆ.

| | | |
|---|---|---|
| 1 | ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ | ರೂ.15.10 ಕೋಟಿ |
| 2 | ಲೋಕೋಪಯೋಗಿ ಇಲಾಖೆ | ರೂ.27.26 ಕೋಟಿ |
| 3 | ಪ್ರವಾಸೋದ್ಯಮ ಇಲಾಖೆ | ರೂ.01.00 ಕೋಟಿ |
| | **ಒಟ್ಟು** | **ರೂ.43.36 ಕೋಟಿ** |

ಇ) ವಿಶೇಷ ಅನುದಾನ (ನಗರೋತ್ಥಾನ) ದಡಿ ರೂ. 126.69 ಕೋಟಿ ಮಂಜೂರಾಗಿದೆ ಆ ಪೈಕಿ ಇದುವರೆವಿಗೂ ರೂ.0.48 ಲಕ್ಷ ಬಿಡುಗಡೆಯಾಗಿದೆ. ನಗರೋತ್ಥಾನದಡಿ 90 ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ.

ಈ) ಬಂದಿದೆ.

ಉ) ಜಿಲ್ಲೆಯ ಅಭಿವೃದ್ಧಿ ಕಾಮಗಾರಿಗಳಿಗೆ ವಿವಿಧ ಇಲಾಖೆಗಳಿಂದ ಅನುದಾನ ಲಭ್ಯತೆಯಂತೆ ಹಣ ಬಿಡುಗಡೆ ಮಾಡಲಾಗುತ್ತಿದೆ.

**ಉಳ್ಳಾಲದ ಸಯ್ಯದ ಮದನಿ ದರ್ಗಾ "ಉರುಸ್‌ಗೆ" ಅನುದಾನ**
**(226)129**

**ಶ್ರೀ ಖಾದರ್ ಯು.ಟಿ (ಮಂಗಳೂರು)**

ಅ) ಮಂಗಳೂರಿನ ಉಳ್ಳಾಲದ ಸಯ್ಯದ್ ಮದನಿ ದರ್ಗಾದ ಉರುಸ್ ಕಾರ್ಯಕ್ರಮಕ್ಕೆ ಸರ್ಕಾರವು ಮಂಜೂರು ಮಾಡಿದ ಹಣವೆಷ್ಟು (ಕಳೆದ ಮೂರು ವರ್ಷಗಳ ವಿವರ ನೀಡುವುದು)?

ಆ) ಮಂಜೂರು ಮಾಡಿದ ಅನುದಾನವನ್ನು ಸಂಪೂರ್ಣವಾಗಿ ಬಿಡುಗಡೆ ಮಾಡದೇ ಇರಲು ಕಾರಣಗಳೇನು (ವಿವರ ಒದಗಿಸುವುದು)?